# ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಕೇಂದ್ರ ಕಾರ್ಯಾಲಯ, #39, ಶಾಂತಿಗೃಹ, ಅರಮನೆ ರಸ್ತೆ, ಬೆಂಗಳೂರು – 560 001

ದೂ:+91-80-2226 0017;+91-80-2226 7470;+91-80-2226 1047 ಮಿಂಚಂಚೆ: info@bsgkarnataka.org ಅಂತರ್ಜಾಲ: www.bsgkarnataka.org

ಸಂಖ್ಯೆ:SHQ/ORG.1/Letter/2025-26/1531 ದಿನಾಂಕ:11.11.2025

ಜಿಲ್ಲಾ ಕಾರ್ಯದರ್ಶಿಯವರಿಗೆ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್
ಜಿಲ್ಲಾ ಸಂಸ್ಥೆ, ______________________ಜಿಲ್ಲೆ

ಮಾನ್ಯರೆ,

ವಿಷಯ:- ಕಲಬುರಗಿ ವಿಭಾಗೀಯ ಮಟ್ಟದ ಗೀತಗಾಯನ ಗೀತಗಾಯನ ಸ್ಪರ್ಧೆಯನ್ನು ಆಯೋಜಿಸಿರುವ ಬಗ್ಗೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆ ಮತ್ತು **ರಾಯಚೂರು** ಜಿಲ್ಲಾ ಸಂಸ್ಥೆಯ ಸಹಯೋಗದೊಂದಿಗೆ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳಿಗೆ **ಕಲಬುರಗಿ ವಿಭಾಗೀಯ ಮಟ್ಟದ ಗೀತಗಾಯನ ಸ್ಪರ್ಧೆಯನ್ನು** ದಿನಾಂಕ: 07.12.2025ರಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಜಿಲ್ಲಾ ಸ್ಕೌಟ್ ಭವನ, ನಿಜಲಿಂಗಪ್ಪ ಕಾಲೋನಿ, ರಾಯಚೂರು ಜಿಲ್ಲೆ ಇಲ್ಲಿ ಆಯೋಜಿಸಲಾಗಿದೆ. ಈ ಸ್ಪರ್ಧೆಯಲ್ಲಿ ಭಾಗವಹಿಸುವ ಅಭ್ಯರ್ಥಿಗಳು, **ಜಿಲ್ಲಾ ಮಟ್ಟದ ಗೀತಗಾಯನ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಮಾತ್ರ ಭಾಗವಹಿಸುವುದು**. ಸ್ಪರ್ಧೆಯ ವಿವರಗಳು ಈ ಕೆಳಕಂಡಂತಿದೆ.

| | |
|---|---|
| ಸ್ಪರ್ಧೆ | ಕಲಬುರಗಿ ವಿಭಾಗೀಯ ಮಟ್ಟದ ಗೀತಗಾಯನ ಸ್ಪರ್ಧೆ |
| ಸ್ಥಳ | ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಜಿಲ್ಲಾ ಸ್ಕೌಟ್ ಭವನ, ನಿಜಲಿಂಗಪ್ಪ ಕಾಲೋನಿ, ರಾಯಚೂರು ಜಿಲ್ಲೆ |
| ದಿನಾಂಕ | 7.12.2025ರ ಭಾನುವಾರದಂದು |
| ಹಾಜರಾಗುವ ಸಮಯ | ಬೆಳಗ್ಗೆ 8.00 ಗಂಟೆಗೆ |
| ಬಿಡುಗಡೆ ಸಮಯ | ಸಂಜೆ 6.00 ಗಂಟೆಗೆ |
| ಊಟೋಪಚಾರದ ವ್ಯವಸ್ಥೆ | ರಾಯಚೂರು ಜಿಲ್ಲಾ ಸಂಸ್ಥೆಯವರು ನಿರ್ವಹಿಸಲಿರುವರು |
| ತರಬೇಕಾದ ವಸ್ತುಗಳು | ತಟ್ಟೆ, ಲೋಟ, ಪೆನ್ನು, ನೋಟ್ ಪುಸ್ತಕ, ವೈಯುಕ್ತಿಕ ಸಾಮಗ್ರಿಗಳು |
| ಸ್ಪರ್ಧೆಯ ವಿವರಗಳು | 1. **06 ಕಬ್ಸ್ ಮತ್ತು 06 ಬುಲ್‌ಬುಲ್ಸ್ ಪ್ರತ್ಯೇಕ** ತಂಡವಾಗಿ ರಚಿಸಿ, ದೇಶಭಕ್ತಿ ಗೀತಗಾಯನ ಸ್ಪರ್ಧೆಯನ್ನು ಏರ್ಪಡಿಸುವುದು. [Solo ಹಾಡಲು ಅವಕಾಶವಿರುವುದಿಲ್ಲ]<br>2. **08 ಸ್ಕೌಟ್ಸ್ ಮತ್ತು 08 ಗೈಡ್ಸ್‌ಗಳ** ತಂಡವಾಗಿ ರಚಿಸಿ, ದೇಶಭಕ್ತಿ ಗೀತಗಾಯನ ಸ್ಪರ್ಧೆಯನ್ನು ಏರ್ಪಡಿಸುವುದು.<br>3. **06 ರೋವರ್ಸ್ ಮತ್ತು 06 ರೇಂಜರ್ಸ್** ತಂಡವಾಗಿ ರಚಿಸಿ, ಜಾನಪದ ಗೀತಗಾಯನ ಸ್ಪರ್ಧೆಯನ್ನು ಏರ್ಪಡಿಸುವುದು.<br>4. ಪ್ರತಿಯೊಂದು ತಂಡಕ್ಕೆ **ಗರಿಷ್ಠ 6** ನಿಮಿಷ ಮಾತ್ರ ಹಾಡಲು ಕಾಲಾವಕಾಶ.(ನಿಲ್ಲುವುದು, ವಿವರಣೆ ನೀಡುವುದು ಎಲ್ಲವು ಸೇರಿ)<br>5. ಕಡ್ಡಾಯವಾಗಿ ಸ್ಕೌಟ್-ಗೈಡ್ ಸಮವಸ್ತ್ರ ಧರಿಸಿಕೊಂಡು ಹಾಡುವುದು.<br>6. ಗೀತಗಾಯನದಲ್ಲಿ ಭಾಗವಹಿಸುವ ಮಕ್ಕಳಿಗೆ ಹಾರ್ಮೋನಿಯಂ, ಚರ್ಮವಾದ್ಯಗಳು, ಗೆಜ್ಜೆ ಮತ್ತು ಕೊಳಲು ಇವುಗಳನ್ನು ಬಳಸಲು ಅವಕಾಶ ನೀಡಲಾಗಿದೆ. ಎಲೆಕ್ಟ್ರಾನಿಕ್, ಕರೋಕೆ, ಟ್ರ್ಯಾಕ್, ಪೆನ್‌ಡ್ರೈವ್, ಕ್ಯಾಸೆಟ್, ಇತ್ಯಾದಿಗಳನ್ನು ಬಳಸುವಂತಿಲ್ಲ. ಧ್ವನಿಮುದ್ರಿತ ಯಾವುದೇ ಉಪಕರಣಗಳನ್ನು ಬಳಸುವಂತಿಲ್ಲ. (ಸ್ಪರ್ಧೆಗೆ ನಿಗದಿಪಡಿಸಿರುವ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಅವರುಗಳೇ ವಾದ್ಯಗಳನ್ನು ನುಡಿಸಬಹುದು) |
| ಭಾಗವಹಿಸುವ ಜಿಲ್ಲೆಗಳು | ರಾಯಚೂರು, ಬೀದರ, ಬಳ್ಳಾರಿ, ವಿಜಯನಗರ, ಕೊಪ್ಪಳ, ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯಿಂದ ಜಿಲ್ಲಾ ಹಂತದಲ್ಲಿ ಪ್ರಥಮ ಸ್ಥಾನ ಪಡೆದ ಕಬ್ಸ್-ಬುಲ್‌ಬುಲ್ಸ್, ಸ್ಕೌಟ್ಸ್-ಗೈಡ್ಸ್, ರೋವರ್ಸ್-ರೇಂಜರ್ಸ್‌ಗಳು ಭಾಗವಹಿಸುವುದು. |

| | |
|---|---|
| ಪ್ರಯಾಣ ಭತ್ಯೆ | ಹೋಗಿ ಬರುವ ಪ್ರಯಾಣ ಭತ್ಯೆಯನ್ನು ಆಯಾಯ ಶಾಲಾ/ಕಾಲೇಜು ನಿಧಿಯಿಂದ ಭರಿಸಿಕೊಳ್ಳುವುದು. |
| ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದವರ ಮೊಬೈಲ್ ಸಂಖ್ಯೆ | ಶ್ರೀ. ಬಸಪ್ಪ ಗದ್ದಿ, ಜಿಲ್ಲಾ ಕಾರ್ಯದರ್ಶಿ, ರಾಯಚೂರು - 9449613111<br>ಶ್ರೀ ಅಂಬಣ್ಣ, ಡಿ.ಒ, ರಾಯಚೂರು – 8884420918<br>ಶ್ರೀಮತಿ ಮಲ್ಲೇಶ್ವರಿ ಜುಜಾರಿ, ಎಎಸ್ಒಸಿ & ಕಲ್ಯಾಣ ಕರ್ನಾಟಕ ಉಸ್ತುವಾರಿ, ಪ್ರಭಾರಿ ರೇಂಜರಿಂಗ್, ಕರ್ನಾಟಕ - 7259115730<br>ಶ್ರೀ. ಎಂ. ಪ್ರಭಾಕರ್ ಭಟ್, ಎಸ್.ಒ.ಸಿ(ಸ್ಕೌ), ಕರ್ನಾಟಕ – 9448914540<br>ಶ್ರೀಮತಿ. ಸಿ. ಮಂಜುಳ, ಎಸ್.ಒ.ಸಿ(ಗೈ), ಕರ್ನಾಟಕ – 9482433516 |

ದಳನಾಯಕರುಗಳು ಉತ್ತಮ ತಯಾರಿಯೊಂದಿಗೆ ಭಾಗವಹಿಸುವುದು. ಭಾಗವಹಿಸಿದವರಿಗೆ ಪ್ರಮಾಣ ಪತ್ರ ಮತ್ತು ವಿಜೇತರಿಗೆ ನಗದು ಬಹುಮಾನವನ್ನು ನೀಡಲಾಗುವುದು. ದಳನಾಯಕರುಗಳು ಮಕ್ಕಳನ್ನು ಸುರಕ್ಷಿತವಾಗಿ ಕರೆತಂದು ಮತ್ತು ಅವರವರ ಮನೆಗೆ ತಲುಪಿಸುವ ಜವಾಬ್ದಾರಿಯಾಗಿರುತ್ತದೆ. ಸ್ಪರ್ಧೆಗೆ ಭಾಗವಹಿಸುವ ಜಿಲ್ಲೆಗಳು ಭಾಗವಹಿಸುವವರ ಸಂಖ್ಯೆ ಮತ್ತು ವಿವರಗಳನ್ನು **ದಿನಾಂಕ:30.11.2025ರ** ಒಳಗಾಗಿ ರಾಯಚೂರು ಜಿಲ್ಲಾ ಸಂಸ್ಥೆ ಮತ್ತು ರಾಜ್ಯ ಸಂಸ್ಥೆಗೆ ತಿಳಿಸುವುದು.

ಸ್ಕೌಟ್ಸ್-ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ.ಗಂಗಪ್ಪಗೌಡ)
ರಾಜ್ಯ ಕಾರ್ಯದರ್ಶಿಗಳು

**ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ:**

1. ಜಿಲ್ಲಾ ಮುಖ್ಯ ಆಯುಕ್ತರು, ಭಾ.ಸ್ಕೌ&ಗೈ, ರಾಯಚೂರು ಜಿಲ್ಲೆ
2. ಸಂಘಟಕರು, ಭಾ.ಸ್ಕೌ&ಗೈ, ರಾಯಚೂರು, ಬೀದರ, ಬಳ್ಳಾರಿ, ವಿಜಯನಗರ, ಕೊಪ್ಪಳ, ಕಲಬುರಗಿ ಮತ್ತು ಯಾದಗಿರಿ ಜಿಲ್ಲೆ
3. ಕಛೇರಿ ಪ್ರತಿ